ನಿಯಮ-72-479

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಸಿ.ಕೊಂಡಯ್ಯ ಇವರು ನಿಯಮ 72ರಡಿಯಲ್ಲಿ ಗಮನ ಸೆಳೆದಿರುವ ಸೂಚನೆಗೆ ಉತ್ತರ.**

********

**ವಿಷಯ:**

**ಸರ್ಕಾರವು ಈ ಹಿಂದೆ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದಂತ ಕಾಂತರಾಜ್ ರವರ ಅಧ್ಯಕ್ಷತೆಯಲ್ಲಿ ಜಾತಿ ಗಣತಿಯ ಸಮೀಕ್ಷೆಯನ್ನು ನಡೆಸಿ ಇದಕ್ಕಾಗಿ ಸುಮಾರು 177.00 ಕೋಟಿಗಳನ್ನು ಖರ್ಚು ಮಾಡಿರುತ್ತದೆ. ಆದರೆ ಈವರೆವಿಗೂ ಕೂಡ ಸದನದಲ್ಲಿ ವರದಿ ಮಂಡಿಸಿರುವುದಿಲ್ಲ. ಇದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿ ಗಮನ ಸೆಳೆಯ ಬಯಸುತ್ತೇನೆ.**

**ಉತ್ತರ:**

ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ರಾಜ್ಯಾದ್ಯಂತ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು 2015ರಲ್ಲಿ ನಡೆಸಲಾಗಿರುತ್ತದೆ. ಆಯೋಗವು ರಾಜ್ಯಾದ್ಯಂತ ಗಣತಿ ಕಾರ್ಯವನ್ನು ಕೈಗೊಂಡು ಇದಕ್ಕೆ ಸಂಬಂಧಿಸಿದ ಎಲ್ಲಾ ಪೂರಕ ವಿವರಗಳನ್ನು ಗಣಕೀಕರಣಗೊಳಿಸಲಾಗಿದೆ. ಈ ಕಾರ್ಯಕ್ಕಾಗಿ ಇದುವರೆವಿಗೂ ಆಯೋಗದ ವತಿಯಿಂದ ರೂ.162.00 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಪ್ರಸ್ತುತ ಸರ್ಕಾರಕ್ಕೆ ಆಯೋಗದಿಂದ ಸಮೀಕ್ಷಾ ವರದಿಯನ್ನು ಸಲ್ಲಿಸಲಾಗಿರುವುದಿಲ್ಲ. ದಿನಾಂಕ: 21.09.2019 ರಂದು ಆಯೋಗದ ಅಧ್ಯಕ್ಷರಾಗಿದ್ದ ಶ್ರೀ ಕಾಂತರಾಜರವರು ಮತ್ತು ಸದಸ್ಯರುಗಳ ಪದಾವಧಿಯನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆಯೋಗಕ್ಕೆ ಹೊಸದಾಗಿ ಅಧ್ಯಕ್ಷ\ಸದಸ್ಯರುಗಳನ್ನು ನೇಮಕಮಾಡಿದ ನಂತರ ಸಮೀಕ್ಷಾ ವರದಿಯ ಬಗ್ಗೆ ಆಯೋಗದೊಂದಿಗೆ ಚರ್ಚಿಸಿ ಕ್ರಮವಹಿಸಲಾಗುವುದು.

**ಸಂಖ್ಯೆ: ಹಿಂವಕ 144 ಬಿಸಿಎ 2019**

(ಬಿ. ಶ್ರೀರಾಮುಲು)
**ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.**